## ಸಿವಿಲ್ ನ್ಯಾಯಾಧೀಶರು ಮತ್ತು ಹೆಚ್ಚುವರಿ ಪ್ರ.ದ.ನ್ಯಾದಂ.ರವರ ನ್ಯಾಯಾಲಯ, ತರೀಕೆರೆ.

## ಕ್ರಿಮಿನಲ್ ಮೊಕದ್ದಮೆ ಸಂಖ್ಯೆ 1054/2022

ಪಿರ್ಯಾದಿ: ರಾಜ್ಯದ ಪರವಾಗಿ ಅಜ್ಜಂಪುರ ಪೊಲೀಸರು

- ವಿರುದ್ಧ -

ಆರೋಪಿ/ತರುಃ

**1**. ಶ್ರೀ ಕುಮಾರ ಬಿನ್ ಶ್ರೀ ರಾಜಣ್ಣ, 40 ವರ್ಷ, ವಾಸಃ 2 ನೇ ಕ್ರಾಸ್, ಜಿಂಕ್ ಲೈನ್ ರಸ್ತೆ, ಭಧ್ರಾವತಿ ನಗರ.

**2**. ಶ್ರೀ ಮಹಮ್ಮದ್ ಖಲಂದರ್ ಬಿನ್ ಶ್ರೀ ಮಹಮ್ಮದ್ ಹಯಾತ್ ಸಾಬ್, 36 ವರ್ಷ, ವಾಸಃ ಮಾರುತಿ ಸ್ಟ್ರೀಟ್, 1 ನೇ ತಿರುವು, ಕೋಡಿ ಕ್ಯಾಂಪ್, ತರೀಕೆರೆ ನಗರ, ತರೀಕೆರೆ ತಾಲ್ಲೂಕು.

****

## ದೋಷಾರೋಪಣೆ

ಶ್ರೀ ಶಿವಕುಮಾರ್.ಆರ್., ಬಿ.ಎ.ಎಲ್., ಎಲ್.ಎಲ್.ಬಿ., ಸಿವಿಲ್ ನ್ಯಾಯಾಧೀಶರು ಮತ್ತು ಹೆಚ್ಚುವರಿ ಪ್ರ.ದ.ನ್ಯಾದಂ., ತರೀಕೆರೆ ಆದ ನಾನು ಆರೋಪಿಯಾದ ನಿಮ್ಮ ವಿರುದ್ಧ ಮಾಡುವ ದೋಷಾರೋಪಣೆ ಏನೆಂದರೆಃ-

ದಿನಾಂಕ 26.06.2019 ರಂದು ಸಂಜೆ 5.00 ಗಂಟೆ ಸಮಯದಲ್ಲಿ ಅಜ್ಜಂಪುರ ಪೊಲೀಸ್ ಠಾಣಾ ಸರಹದ್ದಿನ ಅಜ್ಜಂಪುರ ನಗರದ ಎಂ.ಜಿ.ವೃತ್ತದ ಹತ್ತಿರ ಇರುವ ಶೆಟ್ರು ಸಿದ್ದಪ್ಪ ಕಾಲೇಜಿನ ಮುಂಭಾಗದಲ್ಲಿ 1 ನೇ ಆರೋಪಿಯಾದ ನೀವು 2 ನೇ ಆರೋಪಿಯಾದ ನಿಮಗೆ ಸೇರಿದ ಲಾರಿ ಸಂಖ್ಯೆ ಕೆಎ.14.ಎ.0905 ರಲ್ಲಿ ಯಾವುದೇ ಪರವಾನಿಗೆ ಇಲ್ಲದೆ ಸಮಾನ ಉದ್ದೇಶದಿಂದ ರಹದಾರಿ ಮರಳಿನೊಂದಿಗೆ ಹೆಚ್ಚುವರಿಯಾಗಿ 5.96 ಟನ್ ಅಕ್ರಮ ಮರಳನ್ನು ಕಳ್ಳತನದಿಂದ ಸಾಗಾಟ ಮಾಡಿ ಸರ್ಕಾರದ ಬೊಕ್ಕಸಕ್ಕೆ ನಷ್ಟವನ್ನುಂಟು ಮಾಡಿದ್ದು ಆದಕಾರಣ 1 ಮತ್ತು 2 ನೇ ಆರೋಪಿತರಾದ ನೀವು ಭಾರತೀಯ ದಂಡ ಸಂಹಿತೆ ಕಲಂ 379 ಸಹವಾಚಕ ಕಲಂ 34 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುವಿರಿ.

ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ 1 ನೇ ಆರೋಪಿಯಾದ ನೀವು ಕೆಎ.14.ಎ.0905 ರ ಲಾರಿಯನ್ನು ಚಾಲನೆ ಮಾಡಲು ಚಾಲನ ಪರವಾನಿಗೆ ಇಲ್ಲದೆ ಇದ್ದರು ಸಹ ಚಾಲನೆ ಮಾಡಿದ್ದು, ಆದಕಾರಣ 1 ನೇ ಆರೋಪಿಯಾದ ನೀವು ಭಾರತೀಯ ಮೋಟಾರು ವಾಹನ ಕಾಯ್ದೆ ಕಲಂ 3(1) ಸಹವಾಚಕ ಕಲಂ 181 ರ ಅಡಿ ಅಡಿ ಶಿಕ್ಷಾರ್ಹ ಅಪರಾಧ ಮಾಡಿರುವಿರಿ.

ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ 2 ನೇ ಆರೋಪಿಯಾದ ನೀವು ಕೆಎ.14.ಎ.0905 ರ ಲಾರಿಗೆ ವಿಮೆ ಮಾಡಿಸದೆ 1 ನೇ ಆರೋಪಿಗೆ ಚಲಾಯಿಸಲು ನೀಡಿದ್ದು, ಆದಕಾರಣ 2 ನೇ ಆರೋಪಿಯಾದ ಭಾರತೀಯ ಮೋಟಾರು ವಾಹನ ಕಾಯ್ದೆ ಕಲಂ 146 ಸಹವಾಚಕ ಕಲಂ 196 ರ ಅಡಿ ಶಿಕ್ಷಾರ್ಹ ಅಪರಾಧ ಮಾಡಿರುವಿರಿ.

ನೀವು ಸದರಿ ಆರೋಪ ಮೇಲೆ ಈ ನ್ಯಾಯಾಲಯದಿಂದ ವಿಚಾರಣೆಗೆ ಗುರಿಯಾಗತಕ್ಕುದೆಂದು ನಾನು ಈ ಮೂಲಕ ನಿರ್ದೇಶಿಸುತ್ತೇನೆ.

ದಿನಾಂಕಃ 21.05.2024

ಸಹಿ/-
**(ಶಿವಕುಮಾರ್.ಆರ್)**
ಸಿವಿಲ್ ನ್ಯಾಯಾಧೀಶರು ಮತ್ತು
ಹೆಚ್ಚುವರಿ ಪ್ರ.ದ.ನ್ಯಾದಂ., ತರೀಕೆರೆ.